**ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಃ 756/2023**

| | ಚಾಸಾಃ 22 | ಅಸಾಃ 12 |
|---|---|---|
| ಹೆಸರು | ಗಿರೀಶ | |
| ತಂದೆಯ ಹೆಸರು : | ಕೃಷ್ಣೇಗೌಡ | |
| ವಯಸ್ಸು: | 41 ವರ್ಷ | |
| ಕೆಲಸಃ | ಬೇಕರಿ ವ್ಯಾಪರ | |
| ವಾಸಸ್ಥಳ | ಬಿ ಕಾಟೀಹಳ್ಳಿ | |

ದಿನಾಂಕಃ **10.09.2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನಾನು 6ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ಬರೆಯಲು ನಿಖರವಾಗಿ ಬರುವುದಿಲ್ಲ. ನನ್ನ ಬೇಕರಿಯ ಹೆಸರು ನಂಜುಂಡೇಶ್ವರ ಕೇಕ್ ಹೌಸ, ಬಿ. ಕಾಟೀಹಳ್ಳಿಯಲ್ಲಿರುತ್ತದೆ. ನಮ್ಮ ಬೇಕರಿಗೆ ಸಿಸಿಟಿವಿ ಅಳವಡಿಸಿರುತ್ತೇನೆ. ಆರೋಪಿ 1 ರಿಂದ 4 ರವರನ್ನು ನೋಡಿಲ್ಲ. ಚಾಸಾ-20 ಮತ್ತು 21 ರವರು ಗೊತ್ತಿಲ್ಲ. ಸಾಕ್ಷಿ ನಿಪಿ-20 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-20(ಸಿ) ಎಂದು ಗುರುತಿಸಲಾಯಿತು.

ಸುಮಾರು 2 ವರ್ಷಗಳ ಹಿಂದೆ ಸಿಸಿಟಿವಿ ಇದೆಯಾ ಎಂದು ಕೇಳಿದ್ದು, ಸಿಸಿಟಿವಿ ಇದೆ ಎಂದು ಹೇಳಿದೆ, ಆಗ ಪೊಲೀಸರು ಸಿಸಿಟಿವಿಯನ್ನು ಪಡೆದು ಪೊಟೋ ಹೊಡೆದು ತೆಗೆದುಕೊಂಡು ಹೋದರು. ಆ ಸಮಯದಲ್ಲಿ ಪೊಲೀಸರು ಬರವಣಿಗೆ ಮಾಡಿಲ್ಲ. ಆ ಸಮಯದಲ್ಲಿ ಚಾಸಾ-21 ರವರು ಹಾಜರಿದ್ದೆವು. ನಿಪಿ20 ರಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ಸಾಕ್ಷಿ ನಿಪಿ-22 ರಲ್ಲಿ ಪೊಟೋದಲ್ಲಿ ತನ್ನನ್ನು ಚಾಸಾ-21 ಮತ್ತು ಇನ್ನೊಬ್ಬರನ್ನು ನೋಡಿ ಗುರುತಿಸಿರುತ್ತಾರೆ.

( ಈ ಹಂತದಲ್ಲಿ ಮಾನ್ಯ ಸ.ಅ. ರವರು ಸೀಲ್ ಮಾಡಿ ಪ್ಯಾಕ್ ಮಾಡಿರುವ ಮುದ್ದೆ ಮಾಲನ್ನು ತೆರೆಯಲು ನ್ಯಾಯಾಲಯದ ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಸಾಕ್ಷಿ ನ್ಯಾಯಾಲಯದ ಮುಂದಿರುವ ಡಿವಿಆರ್ ನ್ನು ನೋಡಿ ಗುರುತಿಸಿದ್ದು ಅದನ್ನು ಮುಮಾ-11 ಎಂದು ಗುರುತಿಸಲಾಯಿತು. ಸಾಕ್ಷಿ ಬಿಳಿ ಬಟ್ಟೆಗೆ ಅಂಟಿಸಿರುವ ಚೀಟಿಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿರುತ್ತೇನೆ.

( ಈ ಹಂತದಲ್ಲಿ ಅಭಿಯೋಗದ ಕೇಸಿಗೆ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದು ಮಾನ್ಯ ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)

ಪಾಟೀಸವಾಲುಃ ಎಸ್‌ಪಿಪಿ ರವರಿಂದಃ

ದಿ. 31.10.2023 ರಂದು ಪೊಲೀಸರು ಬಂದಿರುತ್ತಾರೆ ಎಂದರೆ ದಿನಾಂಕ ನೆನಪಿಲ್ಲ. ಕೇಸಿನ ಹತ್ಯೆ ಆಗಿರುವ ದೃಶ್ಯಾವಳಿಯು ನನ್ನ ಅಂಗಡಿಯ ಸಿಸಿಟಿವಿಯಲ್ಲಿ ಸೇರಿಯಾಗಿದ್ದರಿಂದ ಡಿವಿಆರ್ ಅನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ವಿಷಯ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಪೊಲೀಸರು ಡಿವಿಆರ್ ನ್ನು ವಶಪಡಿಸಿಕೊಂಡು ಮಹಜರ್ ಮಾಡಿ ನಿಪಿ-20 ಕ್ಕೆ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿದ್ದು ನಿಪಿ-20 ರ ಸಂಗತಿಗಳನ್ನು ತಿಳಿದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ನಿಪಿ-20 22 ರ ವಿಷಯ ಗೊತ್ತಿದ್ದರೂ ಸಹಾ ಆರೋಪಿತರು ನನಗೆ ಪರಿಚಯಸ್ಥರಾಗಿದ್ದರಿಂದ ನಿಜಾಂಶ ಹೇಳಿದರೆ ಅವರಿಗೆ ತೊಂದರೆಯಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಮಧ್ಯಾಹ್ನ 1.30-2.30 ಗಂಟೆ ಮಹಜರ್ ಮಾಡಿರುತ್ತಾರೆ ಎಂದರೆ ಸಾಕ್ಷಿ ಪೊಲೀಸರು ಆ ಸಮಯದಲ್ಲಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ಪಾಟೀ ಸವಾಲುಃ 4ನೇ ಆರೋಪಿತರ ಪರ ಶ್ರೀ ಎಂ ಜೆ ಪಿ ವಕೀಲರಿಂದಃ

ಪೊಲೀಸರು ನನ್ನ ಬೇಕರಿಯ ಬಗ್ಗೆ ಯಾವುದೇ ದಾಖಲೆ ಪಡೆದಿರುವುದಿಲ್ಲ. ಡಿವಿಆರ್ ಗೆ ಸಂಬಂಧಪಟ್ಟಾಗೆ ಬಿಲ್ ನ್ನು ನಾನು ಠಾಣೆಗೆ ಕೊಟ್ಟಿರುವುದಿಲ್ಲ. ಮಹಜರಿನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ

ಸರಿ. ಪೊಲೀಸರು ನನ್ನ ಹೇಳಿಕೆಯಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಯಾವ ವಿಚಾರಕ್ಕೆ ಡಿವಿಆರ್ ನ್ನು ವಶಪಡಿಸಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರ ಒತ್ತಾಯದ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಯಾರು ಫೋಟೋ ತೆಗೆದರು ಎಂದು ಗೊತ್ತಿಲ್ಲ.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ